ಹೀರುತ್ತಿತ್ತೇ ಹೊರತು ಕೆಲಸ ಸುಲಭ ಸಾಧ್ಯವಂತೂ ಆಗಿರಲಿಲ್ಲ.

ಒಂದೆಡೆ ಭದ್ರತಾಪಡೆ, ಮತ್ತೊಂದೆಡೆ ಕಮಾಂಡೋ ರೊಬೋ ಪಡೆಯ ನಡುವೆ ಅರೆಮಾನವ ಪಡೆ ಸಿಲುಕಿ ಜರ್ಜರಿತರಾಗಿದ್ದು, ತಾವು ಬಂದ ಕಾರ್ಯವನ್ನೇ ಮರೆತಂತೆ ವಾಗ್ವಾದಕ್ಕಿಳಿದಿದ್ದರು. ಅವರು ಪ್ರತಿಭಟಿಸಿ ಮೆಟ್ರೋದೊಳಗೇ ಉಳಿದುಕೊಂಡಿದ್ದರೆ ಅವರು ಆ ನಗರಿಯಲ್ಲೇ ಇರಲು ಅಪೇಕ್ಷಿಸುತ್ತಿದ್ದರು ಎಂಬುದು ಮನದಟ್ಟಾಗುತ್ತಿತ್ತು. ಆದರೆ ಅವರು ಈ ಪರಿ ಸೆರೆಮನೆಯಿಂದ ಬಿಡುಗಡೆ ಹೊಂದಿದ ಕೈದಿಗಳಂತೆ ಹೊರನುಗ್ಗಿದಾಗ ಹನ್ನಾಳನ್ನು ಉದ್ದೇಶಿಸಿ ಭದ್ರತಾಪಡೆಯ ಮುಖ್ಯಸ್ಥ ನುಡಿದರು.

'ಮ್ಯಾಮ್. ಅವರ ನುಗ್ಗಾಟ ನೋಡಿದರೆ ನಾವು ಬಲಪ್ರಯೋಗ ಮಾಡಬೇಕಾದೀತೇನೋ ಎಂದೆನಿಸುತ್ತಿದೆ. ನೀವು ನಿಮ್ಮ ಕಮಾಂಡೋ ರೊಬೋಗಳಿಗೆ ಆದೇಶ ನೀಡುವಿರಾ? ನನಗೆ ನೀಡಲಾದ ಕಮಾಂಡೋ ರೊಬೋಗಳಿಗೂ ನಾನು ನಿರ್ದೇಶನ ನೀಡುತ್ತೇನೆ. ಪ್ರಾಣಹಾನಿಯಾಗದಂತೆ ನೋಡಿಕೊಂಡರಾಯಿತು.'

'ನೀವು ಹೇಳುವುದೂ ಸರಿ ಕಮಾಂಡೆಂಟ್. ಆದರೆ ಮೊದಲೇ ಚಿಕಿತ್ಸೆಗೊಳಪಟ್ಟು ಜೀವನೋಪಾಯಕ್ಕಾಗಿ ಪ್ರತಿಭಟಿಸುವವರಿಗೆ ಪೆಟ್ಟನ್ನು ತಡೆದುಕೊಳ್ಳುವ ಶಕ್ತಿ ಇರುತ್ತದೆಯೇ? ರೊಬೋ ಕಾಪ್‌ಗಳಿಗೆ ಊನವಾದರೂ ಪರವಾಗಿಲ್ಲ. ಕೊಂಚ ತಳ್ಳುವುದರಲ್ಲೇ ಈ ಪಡೆಯನ್ನು ನಿಭಾಯಿಸಿದರೆ ಸಾಕೆನಿಸುತ್ತದೆ.'

'ಮ್ಯಾಮ್ ನಿಮ್ಮಿಷ್ಟ' ಎಂದು ಮುಖ್ಯಸ್ಥ ತನ್ನ ಕಮಾಂಡೋ ಕಾರ್ಯದ ಉಸ್ತುವಾರಿಯೆಡೆ ಗಮನಹರಿಸಿದಾಗ ಹನ್ನಾ ಸಹ ತನ್ನ ಅಧೀನ ಕಾರ್ಯನಿರ್ವಹಿಸುತ್ತಿದ್ದ ಕಮಾಂಡೋ ರೊಬೋಗಳಿಗೆ ಕೈಸನ್ನೆ ಮಾಡುತ್ತಾ 'ಅವರ ನುಗ್ಗಾಟ ನಿಲ್ಲಿಸಿ' ಎಂದು ಆಜ್ಞೆ ನೀಡಿದಳು.

ರೊಬೋ ಕಾಪ್‌ಗಳು ನೂರಾರು ಸಂಖ್ಯೆಯ ಅರೆಮಾನವ ಪಡೆಯ ಸದಸ್ಯರನ್ನು ಸುತ್ತುವರಿದು ಅವರನ್ನು ದ್ವಾರದ ಕಡೆ ಸಾಲು ಸಾಲಾಗಿ ಹೋಗುವಂತೆ ತಳ್ಳಿದಾಗ ಕೆಲವರಿಗೆ ಸಿಟ್ಟು ನೆತ್ತಿಗೇರಿದಂತಾಗಿತ್ತು. 'ಇವರ್ಯಾರು ನಮಗೆ ನಿರ್ದೇಶನ ನೀಡಲು. ಇವರನ್ನು ಮೊದಲು ಹೊಡೆದು ಹಾಕಿ' ಎಂದು ಪಡೆಯಲ್ಲೊಬ್ಬ ಕಿರುಚಿದಾಗ, ಮಿಕ್ಕವರು ಅವರನ್ನು ಜೊತೆಗೂಡಿದ್ದರು.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದುದ್ದನ್ನು ಕಂಡು ಹನ್ನಾ ಅವರ ಸಮೀಪ ನುಗ್ಗಿ ಮೌತ್ ಸ್ಪೀಕರ್‌ನಲ್ಲಿ ಕಿರುಚಿದ್ದಳು. 'ದಯವಿಟ್ಟು ಶಿಸ್ತನ್ನು ಪಾಲಿಸಿ. ದ್ವಾರದ ಹೊರ ಹೋಗಬೇಕಾದಾಗಲೂ ಈ ಗಲಾಟೆ ಏಕೆ? ಇದರಿಂದ ನಿಮ್ಮ ಬೇಡಿಕೆ ಈಡೇರುವುದೆಂದು ನೀವು ಭಾವಿಸಿದರೆ ಅದು ನಿಮ್ಮ ಭ್ರಮೆಯಷ್ಟೇ.'

'ಮ್ಯಾಮ್. ನಮ್ಮನ್ನು ನಮ್ಮ ಪಾಡಿಗೆ ನೀವು ಬಿಡದಿರುವುದರಿಂದಲೇ ಈ ಸಮಸ್ಯೆ ಉದ್ಭವಿಸಿದೆ. ನಿಮ್ಮ ಈ ಯಂತ್ರಗಳನ್ನು ಮೊದಲು ಇಲ್ಲಿಂದ ಹೋಗಲು ಹೇಳಿ. ಇಲ್ಲದಿದ್ದರೆ ನಾವು ಸುಮ್ಮನಿರುವುದಿಲ್ಲ.'

'ನೀವು ಏನು ಮಾಡುವಿರೆಂದು ಗೊತ್ತಿದೆ. ಕಾಪ್ಸ್... ನಿಮ್ಮ ಕವಚಗಳನ್ನು ಹೊರಚಾಚಿ' ಎಂದು ಹನ್ನಾ ಆಜ್ಞೆ ನೀಡುತ್ತಿದ್ದಂತೆಯೇ ರೊಬೋ ಕಾಪ್‌ಗಳ ಉಪ ಅಂಗಗಳಿಂದ ಕೆಲವು ಕವಚಗಳು ರಕ್ಷಣೆಗಾಗಿ ತೆರೆದುಕೊಂಡಿದ್ದವು. ಅರೆಮಾನವ ಪಡೆಯ ಸದಸ್ಯರು ಇದರಿಂದಲೂ ವಿಚಲಿತರಾಗದೆ ರೊಚ್ಚಿಗೆದ್ದ ಯೋಧರಂತೆ ಸಮೀಪದ ಸಾಮಾನು ಸರಂಜಾಮುಗಳಿಗೆ ಕೈ ಹಾಕಿ ಕೈಗೆ ಸಿಕ್ಕ ವಸ್ತುಗಳನ್ನು ರೊಬೋ ಕಾಪ್‌ಗಳೆಡೆ ಬೀಸಿದ್ದರು. ಎಲ್ಲವನ್ನೂ ಬೀಸಿ ಖಾಲಿಯಾದ ಬಳಿಕ ಬಿಡಿ ವಸ್ತುಗಳಿಗಾಗಿ ತಡಕಾಡುವುದನ್ನು ನೋಡಿ ಹನ್ನಾ ಅವರನ್ನು ಬಲವಂತವಾಗಿ ಹೊತ್ತು ಹೊರ ಸಾಗಿಸುವುದೇ ಮೇಲೆನಿಸಿತ್ತು.

ನಿರ್ಗಮನ ದ್ವಾರದ ಹೊರಗೆ ಪಡೆಯ ಸದಸ್ಯರನ್ನು ದೂರದ ಪ್ರದೇಶಗಳಿಗೆ ಕರೆದೊಯ್ಯಲು ವಾಹನಗಳು ಸಜ್ಜಾಗಿದ್ದವು. ಈ ಹಂತವೊಂದು ಮುಗಿದರೆ ತನ್ನ ಅಂದಿನ ಕೆಲಸ ಮುಗಿಸಿದಂತೆ ಎಂದುಕೊಂಡವಳೇ ರೊಬೋ ಕಾಪ್‌ಗಳಿಗೆ ಸೂಚನೆ ನೀಡಿದ್ದಳು.

ನಿಮಿಷಾರ್ಧದಲ್ಲಿ ರೊಬೋ ಕಾಪ್‌ಗಳ ಕೈಗಳು ಸದಸ್ಯರ ಸುತ್ತ ಬಳಸಿ ಹೊರಗೆಳೆದುಕೊಂಡು ಹೋಗಿ ಬಿಡತೊಡಗಿದ್ದವು. ಅರೆಮಾನವರ ಸಂಖ್ಯೆ ನಿಧಾನವಾಗಿ ಕಡಿಮೆಯಾಗುತ್ತಿದ್ದಂತೆಯೇ ಹನ್ನಾ ದ್ವಾರದ ಬಳಿ ನಿಂತು ಹೊರಹೋದ ಸದಸ್ಯರೆಡೆ ಪರೀಕ್ಷಾತ್ಮಕ ನೋಟ ಬೀರಿ ಅವರು ವಾಹನಗಳನ್ನು ಏರುವುದನ್ನು ಖಾತ್ರಿ ಪಡಿಸಿಕೊಂಡು, ತನ್ನ ಸ್ವಸ್ಥಾನಕ್ಕೆ ಹಿಂದಿರುಗುವಾಗ ಯಾವುದೋ ಒಂದು ವಸ್ತು ಅವಳ ಕೈ ತರಚಿ ನೋವಿಗೆ ಸಣ್ಣದಾಗಿ ಚೀರಿದ್ದಳು.

ಅರೆಮಾನವ ಪಡೆಯ ಕೋಪ ಅವಳ ಮೇಲೆ ತಿರುಗಿದ್ದು ಸ್ಪಷ್ಟವಾಗಿತ್ತು. ಕೂಡಲೇ ದ್ವಾರದ ಒಳಹೋಗಿ ದ್ವಾರವನ್ನು ಭದ್ರಪಡಿಸಿಕೊಂಡವಳೇ ತನ್ನ ಎದುರು ಶಿಸ್ತಿನ ಸಿಪಾಯಿಗಳಂತೆ ನಿಂತ ಕಮಾಂಡೋ ರೊಬೋ ಕಾಪ್‌ಗಳನ್ನು ಗಮನಿಸಿದಳು.

ತನ್ನದು ಸಣ್ಣ ಗಾಯವಾಗಿತ್ತು. ಪ್ರಥಮ ಚಿಕಿತ್ಸೆ ನೀಡಿದರೆ ಸಾಕಿತ್ತು. ಆದರೆ ಆ ರೊಬೋಗಳು ಸ್ವರಕ್ಷಣೆಗೆ ಚಾಚಿಕೊಂಡಿದ್ದ ಕವಚಗಳಿಗೆ ಅಪಾರ ಹಾನಿಯಾಗಿತ್ತು. ಹಾನಿಯನ್ನು ಸರಿಪಡಿಸದ ಹೊರತು ಆ ರೊಬೋಗಳನ್ನು ಭದ್ರತಾ ಕಾರ್ಯಗಳಿಗೆ ಬಳಸುವಂತಿರಲಿಲ್ಲ. ಕಮಾಂಡೋ ಭದ್ರತಾ ಪಡೆಯ ಮುಖ್ಯಸ್ಥನ ಅಧೀನ ಕಾರ್ಯ ನಿರ್ವಹಿಸಿದ ಕಮಾಂಡೋ ರೊಬೋಗಳ ಸ್ಥಿತಿಯಲ್ಲೂ ಏನೂ ವ್ಯತ್ಯಾಸವಾಗಿರಲಿಲ್ಲ.

'ಮ್ಯಾಮ್. ನಾವೀಗ ನಮ್ಮ ರೊಬೋ ಸಹಚರರನ್ನು ವರ್ಕ್‌ಶಾಪ್‌ಗೆ ದುರಸ್ಥಿಗೆ ಕರೆದೊಯ್ಯಬೇಕಾಗಿದೆ. ಬೇರೆ ಪಿಕ್ ಅಪ್ ವಾಹನ ಕಳುಹಿಸಲು ನಿಯಂತ್ರಣ ಕೇಂದ್ರಕ್ಕೆ ತಿಳಿಸ್ತೀನಿ.'

'ಹಾಗೇ ಮಾಡಿ. ಅಷ್ಟರಲ್ಲಿ ನನ್ನ ತರಚಿದ ಕೈಗೆ ಒಂದಿಷ್ಟು ಸ್ಪ್ರೇ ಮಾಡಬೇಕಿದೆ' ಎಂದು ತನ್ನ ವಾಹನದತ್ತ ಹೆಜ್ಜೆ ಹಾಕಿದಳು. ಅವಳು ವಾಪಸ್ಸು ಬರುವಷ್ಟರಲ್ಲಿ ಪಿಕ್ ಅಪ್ ವಾಹನದ ಸಿಬ್ಬಂದಿ ಕಮಾಂಡೋ ರೊಬೋಗಳನ್ನು ವಾಹನದ ಹಿಂಬದಿಗೆ ಅಳವಡಿಸಿದ ಕ್ಲಚರ್‌ಗಳಿಂದ ಹಿಡಿದು ಒಳಗೆ ನಿಲ್ಲಿಸುವ ಕಾರ್ಯದಲ್ಲಿ ತೊಡಗಿದ್ದರು. ಕಮಾಂಡೋ ರೊಬೋಗಳನ್ನು ಹೊತ್ತ ವಾಹನ ಸಾಗಿದ ದಿಕ್ಕಿನಲ್ಲೇ ಹನ್ನಾ ಹಾಗೂ ಭದ್ರತಾಪಡೆಯ ಮುಖ್ಯಸ್ಥನ ವಾಹನಗಳೂ ಹೊರಟಿದ್ದವು. ಘಟನೆಗಳೆಷ್ಟು ಬೇಗನೆ ಜರುಗಿದವೋ ಅಷ್ಟೇ ವೇಗವಾಗಿ ಮುಕ್ತಾಯವನ್ನೂ ಕಂಡಿದ್ದವು.

ಅಂದು ಎರಡನೆಯ ಬಾರಿ ಆ ವರ್ಕ್‌ಶಾಪ್‌ನೊಳಗೆ ಕಾಲಿರಿಸುತ್ತಿದ್ದವಳಾದ್ದರಿಂದ ಅಲ್ಲಿನ ವ್ಯವಸ್ಥೆಯ ಪರಿಚಯ ಈಗಾಗಲೇ ಅವಳಿಗಾಗಿತ್ತು. ಆದರೆ ದುರಸ್ತಿಗೊಳಿಸಬೇಕಾದ ರೋಬೋಕಾಪ್‌ಗಳು ಹಲವಾರು ಇದ್ದುದರಿಂದ ಮುಖ್ಯದ್ವಾರದಲ್ಲಿದ್ದ ರೊಬೋ ಸ್ವಾಗತಕಾರಿಣಿಯಿಂದ ಸೂಚನೆ ದೊರಕಿತ್ತು.

'ನೀವು ರೋಬೋಕಾಪ್‌ಗಳನ್ನು ವರ್ಕ್‌ಶಾಪ್‌ಗೇ ನೇರವಾಗಿ ಹೊತ್ತುಕೊಂಡು ಹೋಗಬೇಕಾಗುತ್ತದೆ. ಬದಿಯಲ್ಲಿ ಬ್ಯಾಕ್ ಡೋರ್ ಎಂಟ್ರಿ ಇದೆ. ನೀವು ಆ ಮೂಲಕ ಅವುಗಳನ್ನು ಒಳ ಸಾಗಿಸಬಹುದಾಗಿದೆ' ಎಂದು ಕೈ ಸನ್ನೆಯ ಮೂಲಕ ದಿಕ್ಕನ್ನು ಸೂಚಿಸಿದಾಗ ಹನ್ನಾ ಹಾಗೂ ಮುಖ್ಯಸ್ಥ ಹೊರನಡೆದು ಪಿಕ್ ಅಪ್ ವಾಹನದ ಸಿಬ್ಬಂದಿಗೆ ರೊಬೋ ತೆರವಿಗೆ ಸಜ್ಜಾಗಲು ತಿಳಿಸಿದ್ದರು.

ಕೊಂಚ ಸುಸ್ಥಿತಿಯಲ್ಲಿರುವ ರೊಬೋಗಳು ಸೂಚನೆಯ ಮೇರೆಗೆ ವರ್ಕ್‌ಶಾಪ್‌ನೊಳಗೆ ಯಾರ ಸಹಾಯವೂ ಇಲ್ಲದೆ ನಡೆದುಕೊಂಡು ಸಾಗಿದ್ದರೆ ಇನ್ನೂ ಕೆಲವು ರೊಬೋಗಳ ಕವಚಗಳು ದುರಸ್ತಿಗೊಳಿಸಲಾಗದಷ್ಟು ಹಾನಿಯಾಗಿದ್ದರಿಂದ ಅವುಗಳನ್ನು ವರ್ಕ್‌ಶಾಪ್‌ನ ಟ್ರಾಲಿಯಲ್ಲೇ ಒಳ ಸಾಗಿಸಬೇಕಾಗಿತ್ತು.

**ಸಶೇಷ**


ಯುಗಾದಿ ವಿಶೇಷಾಂಕ 2019

ಸಾಹಿತ್ಯ-ಸಂಸ್ಕೃತಿಯ ಹೊಸರುಚಿ

ಕಥಾಕ್ಷೇತ್ರ

ಕಾವ್ಯವಸಂತ

ನಮ್ಮ ಹೆಮ್ಮೆಯ ಬರಹಗಾರರು

ಮಂಜುನಾಯಕ ಚಳ್ಳೂರು, ಶಾಂತಿ ಅಪ್ಪಣ್ಣ, ರಶ್ಮಿ ಪ್ರವೀಣ್, ಗುರುಪ್ರಸಾದ್ ಕಂಟಲಗೆರೆ, ಕರ್ಕಿ ಕೃಷ್ಣಮೂರ್ತಿ, ಬಾದಲ್, ಸಂತೋಷ ಗುಡ್ಡಿಯಂಗಡಿ, ರಮೇಶ ಅರೋಲಿ, ವಿಕ್ರಂ ಹತ್ವಾರ್, ರಾಜೇಂದ್ರ ಪ್ರಸಾದ್, ಭುವನಾ ಹಿರೇಮಠ, ಕಾವ್ಯಾ ಕಡಮೆ, ಪ್ರವರ ಕೊಟ್ಟೂರು, ಸಹಮತ, ಮೌಲ್ಯ ಸ್ವಾಮಿ, ಚೈತ್ರಿಕಾ ಹೆಗಡೆ

ಈಗ ಮಾರುಕಟ್ಟೆಯಲ್ಲಿ